ಕರ್ನಾಟಕ ಸರ್ಕಾರ

ಡಿಸೆಂಬರ್ 28 , 2016

# ಕಾನೂನು ತಜ್ಞ ಎಸ್. ಹೆಚ್. ಪಟೇಲ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಡಿಸೆಂಬರ್ 28:**

ಕಾನೂನು ತಜ್ಞ ಹಾಗೂ ಮಾಜಿ ಮುಖ್ಯಮಂತ್ರಿ ಜೆ. ಹೆಚ್. ಪಟೇಲ್ ಅವರ ಸಹೋದರ ಶಿವಸ್ವಾಮಿ ಹಾಲಪ್ಪ ಪಟೇಲ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ರಾಜನಹಳ್ಳಿ ಲಕ್ಷ್ಮಣ ಶೆಟ್ಟಿ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರು, ಕುವೆಂಪು ವಿಶ್ವವಿದ್ಯಾಲಯದ ಕಾನೂನು ನಿಕಾಯದ ಸ್ಥಾಪಕ ಡೀನ್, ದಾವಣಗೆರೆ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ, ಬೆಂಗಳೂರಿನ ಭಾರತೀಯ ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯದ ಶಿಕ್ಷಣ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಎಸ್. ಹೆಚ್. ಪಟೇಲ್ ಅವರು ವಿಶ್ವದ ವಿವಿಧ ರಾಷ್ಟ್ರಗಳ ಸಂವಿಧಾನಗಳನ್ನು ಅಧ್ಯಯಿನಿಸಿ-ವಿಶ್ಲೇಷಿಸಿ ಸುಪ್ರಸಿದ್ಧ ಸಂವಿಧಾನ ತಜ್ಞರೆನಿಸಿಕೊಂಡಿದ್ದರು.

ನನಗೂ ಆತ್ಮೀಯ ಸ್ನೇಹಿತರಾಗಿದ್ದ ಎಸ್ ಹೆಚ್ ಪಟೇಲ್ ಅವರು ಶಾಂತವೇರಿ ಗೋಪಾಲ ಗೌಡ, ಕಡಿದಾಳ ಮಂಜಪ್ಪ, ಕೋಣಂದೂರು ಲಿಂಗಪ್ಪ, ಎಸ್. ವೆಂಕಟರಾಮ್ ಅವರ ಜೊತೆ ಒಡನಾಟದೊಂದಿಗೆ ಸಮಾಜವಾದಿ ಸಿದ್ಧಾಂತ ಹಾಗೂ ಲೋಹಿಯಾವಾದದ ಬಗ್ಗೆ ಅಪಾರ ಒಲವು ಬೆಳೆಸಿಕೊಂಡಿದ್ದರು ಎಂದು ಸಿದ್ದರಾಮಯ್ಯ ಅವರು ಸ್ಮರಿಸಿದ್ದಾರೆ.

ಎಸ್ ಹೆಚ್ ಪಟೇಲ್ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

*****************

ಡಿ ಪಿ ಎಂ